ಹೋsskಕಾರ ಹಾಕಿಕೊಂಡು ಓಡಿಬಂದ ನಾಲ್ಕೈದು ಜನ ಯುವಕರು 'ಮಂಜುನಾಥಾನಂದ ಸ್ವಾಮಿಗಳಿಗೇ...', 'ಜೈ...' ಎಂದು ಕೂಗುತ್ತ ದಾಂಗುಡಿಯಿಟ್ಟರು. ಯಾಕೋ ಆತನಿಗೆ ಅವಮಾನವಾದಂತಾಯಿತು. ನಿರ್ಲಿಪ್ತನಾಗಿ ಆಕಾಶ ನೋಡುತ್ತ ಕುಂತೇಬಿಟ್ಟ. ಹಣ್ಣಿನರಸ ತಂದುಕೊಟ್ಟರು, ಕುಡಿಯಲಿಲ್ಲ. ಹಣ್ಣು ತಂದುಕೊಟ್ಟರು, ತಿನ್ನಲಿಲ್ಲ. ಥರಥರದ ಭಕ್ಷ್ಯಭೋಜ್ಯಗಳನ್ನು ತಯಾರಿಸಿ ಮುಂದೆ ಇಟ್ಟರೂ ಬಾಯಿಗಿಟ್ಟುಕೊಳ್ಳಲಿಲ್ಲ.

ಮೊದಲ ತುತ್ತು ಯಾರ ಮನೆಯ ಊಟವನ್ನು ತಿಂದಿದ್ದನೋ ಅವರ ಮನೆಯ ಲಕ್ಷಣಗಳೇ ಬದಲಾಗಲಾರಂಭಿಸಿದವೆಂದು ಜನ ಗುರುತಿಸಲಾರಂಭಿಸಿದರು. ಸಾಲ ಇಸ್ಕೊಂಡು ಕೈಯೆತ್ತಿದವನು ಹುಡುಕಿಕೊಂಡು ಬಂದು ದುಡ್ಡು ಕೊಟ್ಟು ಹೋದನಂತೆ, ಆಯಮ್ಮನ ಮಗಳಿಗೆ ಗಂಡುಮಗು ಹುಟ್ಟಿತಂತೆ, ಹೀಗೆ... ಅವನು ತಿಂದ ಒಂದು ತುತ್ತು ಅನ್ನಕ್ಕೆ ಇಷ್ಟೊಂದು ಶಕ್ತಿ ಇದೆಯೆಂದ ಮೇಲೆ ಉಳಿದವರು ತಮ್ಮ ಕಡೆಗೂ ಸ್ವಾಮೀಜಿಯು ಒಂದೇ ಒಂದು ಕಿರುನೋಟವನ್ನಾದರೂ ಬೀರಲಿ ಎಂದು ಹಂಬಲಿಸಲಾರಂಭಿಸಿದರು.

ಇನ್ಯಾರೋ ಆತನ ಪ್ಯಾಂಟು ಶರಟು ವಾರದಿಂದ ಆಗಿರುವ ಕೊಳೆಯಿಂದ ನೊಂದು ಕಾವಿ ಅಂಗಿ ಪಂಚೆಯನ್ನು ತಂದುಕೊಟ್ಟರು. ತನ್ನಂಥ ಬೈರಾಗಿಗೆ ಪ್ಯಾಂಟು ಶರಟು ಸರಿಯಲ್ಲವೆಂದು ಅವನಿಗೂ ಅನ್ನಿಸಿರಬೇಕು, ಬೆಳಗ್ಗೆ ಎದ್ದು ಕೆರೆ ಕಡೆ ಹೋದವನು ಶೌಚಾದಿಗಳನ್ನು ಮುಗಿಸಿಕೊಂಡು ಕಾವಿ ಅಂಗಿ ಪಂಚೆ ಸುತ್ತಿಕೊಂಡು ಬಂದು ನನ್ನ ಬುಡಕ್ಕೆ ಮತ್ತೆ ಒರಗಿ ಕುಳಿತ. ಯಾರು ಆ ಬಟ್ಟೆಯನ್ನು ತಂದುಕೊಟ್ಟಿದ್ದನೋ ಆತನ ಮನೆಯಲ್ಲಿ ದೊಡ್ಡ ತಿರುವು ಆಗಿಬಿಟ್ಟಿತ್ತು. ಮೂರು ತಿಂಗಳ ಹಿಂದೆ ಗಂಡನನ್ನು ಬಿಟ್ಟು ಹೋಗಿದ್ದ ಆತನ ಹೆಂಡತಿ ತಾನಾಗಿಯೇ ಹುಡುಕಿಕೊಂಡು ಬಂದಿದ್ದಳು. ಇದು ಎಲ್ಲರಿಗೂ ಏನೋ ಪವಾಡ ಎನ್ನಿಸಲಾರಂಭಿಸಿತು. ಹಾಗೆ ಬಂದು ಆತನಲ್ಲಿ ನಿವೇದನೆ ಮಾಡಿಕೊಂಡವರ ಕಡೆಗೊಂದು ಕಿರುನಗೆಯನ್ನು ಬೀರಿ ಮತ್ತೆ ಶೂನ್ಯಕ್ಕೆ ದೃಷ್ಟಿ ನೆಟ್ಟುಬಿಡುತ್ತಿದ್ದ.

ಎಂದಿನಂತೆ ಬೆಳಗ್ಗೆ ಆದಾಗಿನಿಂದ ಸಾಯಂಕಾಲ ಆಗುವವರೆಗೆ ಅರಳಿಕಟ್ಟೆಯನ್ನೇ ಅಡ್ಡೆ ಮಾಡಿಕೊಂಡು ಚೌಕಾಭಾರ ಆಡುತ್ತಿದ್ದ, ಮಧ್ಯಾಹ್ನದ ಒಂದು ತಿಳಿನಿದ್ದೆಯನ್ನು ಮಾಡಿಕೊಂಡು ಹೋಗುತ್ತಿದ್ದ ಯುವಕ ಮುದುಕರಾದಿಯಾಗಿ ಎಲ್ಲರಿಗೂ ಆತನಲ್ಲಿ ಏನೋ ಆತ್ಮೀಯತೆ ಕಾಣಲಾರಂಭಿಸಿತು. ಎಲ್ಲರಲ್ಲೂ ಏನೇನೋ ಗುಸುಗುಸುಗಳು ನಡೆದವು. 'ಸಾಯಂಕಾಲ ಆರುಗಂಟೆಗೆ ಅರಳೀಕಟ್ಟೆಯ ಮುಂದೆ ಊರವರೆಲ್ಲ ಸೇರಬೇಕಂತೆ' ಎಂದು ಊರ ತಳವಾರನಿಗೆ ಹೇಳಿ ಊರಲ್ಲೆಲ್ಲ ಡಂಗುರ ಸಾರಿಸಿದರು.

ಸಭೆಯ ಅಧ್ಯಕ್ಷನ ಥರ ಆಸೀನರಾಗಿದ್ದ ಕಾಳಿಂಗನ ವಂಶಜನಾದ ಕಾಳಿಂಗೇಗೌಡ, ವಿಷಯ ಪ್ರಸ್ತಾಪಿಸಿ 'ತನ್ನ ಮುತ್ತಾತನ ಕಾಲದಿಂದಲೂ ನಮ್ಮ ಕುಟುಂಬ ಇಲ್ಲೇ ಇದ್ದರೂ ಇಂಥದೊಂದು ಘಟನೆ ನಡೆದಿರಲಿಲ್ಲ. ದೈವೇಚ್ಛೆ ಅಂತ ಕಾಣುತ್ತೆ, ನಮ್ಮೂರಿಗೆ ಇಂಥ ಅವಕಾಶ ಒದಗಿಬಂದಿದೆ. ಹೀಗೇ ಬಿಟ್ಟರೆ ಮಂಜುನಾಥಾನಂದ ಸ್ವಾಮೀಜಿಗಳು ಇನ್ನೆಲ್ಲಿಗೋ ಹೋಗಿ ಬಿಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಹೇಗೂ ನಮ್ಮ ಬಸವಣ್ಣನ ದೇವಸ್ಥಾನ ಏನಿದೆ ಅದರ ಮುಂದುವರೆದ ಭಾಗವಾಗಿ ಒಂದು ಮಠವನ್ನು ಆರಂಭಿಸಿದರೆ ಹೇಗೆ?' ಎಂದು ಕೇಳಿದ. ಅದಕ್ಕೆ ಮೊದಲ ಕಾಣಿಕೆಯಾಗಿ ತನ್ನ ಕಡೆಯಿಂದ ಐದು ಎಕರೆ ಜಮೀನನ್ನು ದಾನ ಕೊಡುವುದಾಗಿ ಘೋಷಿಸಿಬಿಟ್ಟ.

ಹೀಗೆ ಬಸವಣ್ಣನ ಮಠಕ್ಕೆ ಮಂಜುನಾಥಾನಂದ ಸ್ವಾಮೀಜಿಗಳು ಅನಭಿಷಿಕ್ತ ಗುರುಗಳಾಗಿ ನೇಮಕಗೊಂಡೇಬಿಟ್ಟರು. ಆದರೆ ಮಾತೇ ಆಡದ ಸ್ವಾಮೀಜಿಗಳು ಇನ್ನು ಮುಂದೆ ಮಾತಾಡುವುದನ್ನು, ಆಶೀರ್ವಾದ ಮಾಡುವುದನ್ನು, ಆಶೀರ್ವಚನ ನೀಡುವುದನ್ನು ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಂಡರು. ಆದರೆ ಗುರುಗಳು ಮಾತಾಡಲಿಲ್ಲ. ಅವರತ್ತ ಸಿಂಹಾವಲೋಕನ ಬೀರುವಂತೆ ತಿರುಗಿನೋಡಿ ಸಣ್ಣದಾಗಿ ಮುಗುಳ್ನಕ್ಕರಷ್ಟೇ. ಅದನ್ನೇ ಆಶೀರ್ವಚನವೆಂದು ಸಂಭ್ರಮಿಸಿದ ಭಕ್ತವೃಂದ ಜೈಕಾರ ಹಾಕಿತು. ತಾವು ತಮ್ಮ ವಾಸ್ತವ್ಯವನ್ನು ಇಲ್ಲಿಂದ ಸದ್ಯಕ್ಕೆ ಬಸವಣ್ಣನ ದೇವಸ್ಥಾನಕ್ಕೆ ವರ್ಗಾಯಿಸಿಕೊಳ್ಳಬೇಕಂತಲೂ, ಮುಂದೆ ಮಠದ ನಿರ್ಮಾಣಕಾರ್ಯ ಪೂರ್ಣವಾದ ಮೇಲೆ ಅಲ್ಲಿಗೆ ಬದಲಾಯಿಸಬಹುದೆಂತಲೂ ಬಿನ್ನವಿಸಿಕೊಂಡರು. ನನ್ನ ಕಟ್ಟೆಯ ಮೇಲಿನ ಕಲ್ಲುಗಳು ಮಗ್ಗಲು ಮುಳ್ಳಾಗಿ ಚುಚ್ಚಿರಬೇಕು, ತಲೆಯಾಡಿಸಿದರು. ಹಾಗೆಂದ ಕೂಡಲೇ ಮತ್ತೊಂದು ಜೈಕಾರ.

ಸರಿ, ಮಠಕ್ಕೊಂದು ಹೆಸರೂ ಬೇಕಲ್ಲ. ಅದನ್ನೂ ಈಗಲೇ ನಿರ್ಧರಿಸಬೇಕೆಂದು ಕೆಲವರು ಪ್ರಸ್ತಾಪಿಸಿದರು. ಹಿಂದೆ ಹುಲಿ ಕಲ್ಲುಮಟ್ಟಿಯ ಮೇಲಿಂದ ಹಾರಿ ಪ್ರಾಣ ಕಳೆದುಕೊಂಡಿದ್ದ ಜಾಗದಲ್ಲಿದ್ದ, ಊರಿನ ದನಕರುಗಳ ಆರೋಗ್ಯವನ್ನೆಲ್ಲ ನೋಡಿಕೊಳ್ಳುತ್ತಿದ್ದ ಬಯಲು ಬಸವಣ್ಣನ ನೆವದಲ್ಲಿ ಕಟ್ಟಲಾಗಿದ್ದ ದೇವಸ್ಥಾನದ ಹೆಸರಲ್ಲಿ ಬಸವನ ಮಠವೆಂದು ಇಡಬೇಕೆಂದು ಕೆಲವರು ಸಲಹೆ ನೀಡಿದರು.

ಅಷ್ಟರಲ್ಲಿ ನನ್ನ ಮೇಲೆ ಆಸೀನವಾಗಿದ್ದ ಹತ್ತಾರು ಕೋತಿಗಳು ಕಿರುಚಾಡಲು ಶುರು ಮಾಡಿದವು. ಅವುಗಳ ಹಿಂಡಿನ ನಾಯಕ ಗಡವ ಕೋತಿ ವಯಸ್ಸಿನ ಕಾರಣಕ್ಕೆ ನಿತ್ರಾಣಗೊಂಡು ತಟ್ಟಾಡಲಾರಂಭಿಸಿತ್ತು. ಕೊಂಬೆಯ ಮೇಲಿದ್ದರೆ ಅದಕ್ಕೆ ಸ್ವಾಧೀನ ತಪ್ಪಿ ಎಲ್ಲಿ ಕೆಳಕ್ಕೆ ಬಿದ್ದು ವಿಕೃತವಾಗಿ ಸಾಯುವುದೋ ಎಂದೆಣಿಸಿ ಅದರ ತಲೆಯೊಳಕ್ಕೆ ಆಲೋಚನೆಯೊಂದನ್ನು ಕಳಿಸಿ, ಅದು ತಡವರಿಸುತ್ತಲೇ ಕೆಳಕ್ಕೆ ಇಳಿದುಹೋಗುವಂತೆ ಮಾಡಿದೆ. ಉಳಿದ ಕೋತಿಗಳು ಅರಚಾಟ ನಡೆಸುತ್ತ ಅವೂ ಹಿಂಬಾಲಿಸಿದವು. ಕೆಳಗೆ ಕುಳಿತಿದ್ದ ಹತ್ತಾರು ಜನರನ್ನು ನೋಡಿ ಅವು ಹಲ್ಲು ಕಿರಿದು ಇನ್ನೇನು ಕಚ್ಚೇ ಬಿಡುತ್ತೇನೆ ನೋಡು ಎನ್ನುವಂತೆ ಹೆದರಿಸಲು ನೋಡಿದವು. ಕೆಲವು ಪುಕ್ಕಲುಗಳು ಎದ್ದು ದೂರ ಓಡಿ ನಿಂತರು. ಮಂಜುನಾಥಾನಂದ ಸ್ವಾಮೀಜಿಗಳು ಹಾಗೇ ಕುಳಿತಿದ್ದರು. ಜೀವದ ಮೇಲಿನ ಆಸೆಯೇ ಬಿಟ್ಟಿದ್ದವನಿಗೆ ಕೋತಿಯ ಭಯವೇ? ಇಳಿದುಬಂದ ಕೋತಿಯು ತಟ್ಟಾಡುತ್ತ ಇನ್ನು ಮುಂದೆ ಹೋಗಲು ತನ್ನಿಂದ ಸಾಧ್ಯವಿಲ್ಲವೆಂದು ಆತನ ಮುಂದೆ ಬಂದು ಕುಳಿತದ್ದು, ತನಗೆ ಚಿಕಿತ್ಸೆ ನೀಡಿ ಉಳಿಸು ಎಂದು ಬೇಡಿಕೊಳ್ಳುವಂತೆ ಆತನ ಕಡೆಗೆ ಮುಖಮಾಡಿ ನಾಲ್ಕೂ ಕಾಲನ್ನು ಮಡಚಿ ತಲೆಯನ್ನು ನೆಲಕ್ಕೂರಿತು. ಉಳಿದವು ಮೇಲಕ್ಕೂ ಕೆಳಕ್ಕೂ, ಹಿಂದಕ್ಕೂ ಮುಂದಕ್ಕೂ ಹೋಗುತ್ತ ಬರುತ್ತ ಅರಚುತ್ತಿದ್ದವು. ಗಡವ ಮಾತ್ರ ಮೆಲ್ಲಗೆ ಕಣ್ಣನ್ನು ಮುಚ್ಚಿದ್ದು ತೆರೆಯಲೇ ಇಲ್ಲ. ನೋಡುವವರು ಅದು ಸ್ವಾಮೀಜಿಗಳ ಮುಂದೆ ಜೀವಬಿಟ್ಟು ತನ್ನನ್ನು ತಾನು ಕೃತಾರ್ಥ ಮಾಡಿತೆಂದುಕೊಂಡು ಮಾತನಾಡಿದರು. ಎಲ್ಲರೂ ಅದರ ಶರಣಾಗತಿಯನ್ನು ಕಂಡು ಸ್ವಾಮೀಜಿಗಳು ಹನುಮಂತನ ಸ್ವಾಮಿಯಾದ ಶ್ರೀರಾಮನ ಅಪರಾವತಾರವೇ ಇರಬೇಕೆಂದು ಪರಿಪರಿಯಾಗಿ ತಮ್ಮೆರಡೂ ಕೆನ್ನೆಗಳನ್ನು ಬಡಿದುಕೊಳ್ಳುತ್ತ ಅಡ್ಡಬಿದ್ದರು. ಸ್ವಾಮೀಜಿಗಳ ಕೀರ್ತಿ ಆಕಾಶದೆತ್ತರಕ್ಕೆ ಏರಲು ಇದೂ ಕಾರಣವಾಯಿತು.

ಕಾಳಿಂಗೇಗೌಡರು ತಾವು ಮಠಕ್ಕೆ ಬಿಟ್ಟುಕೊಡುತ್ತೇವೆಂದು ಹೇಳಿದ್ದ ಜಮೀನಿನಲ್ಲಿಯೇ ಆ ವೃದ್ಧ ಕೋತಿಯ ಸಂಸ್ಕಾರ ಮಾಡುವುದೆಂತಲೂ ಬಸವನ ಮಠದ ಬದಲು ಹನುಮನ ಮಠ ಮಾಡುವುದೆಂತಲೂ ನಿರ್ಧಾರಕ್ಕೆ ಬಂದರು. ಸ್ವಾಮೀಜಿಗಳು, ಇದ್ದಕ್ಕಿದ್ದಂತೆ 'ಸಾವಿನ ಮಠ' ಎಂದುಬಿಟ್ಟರು. ಎಲ್ಲರೂ ಈ ಧ್ವನಿ ಎಲ್ಲಿಂದ ಬಂತೆಂದು ವಿಚಿತ್ರವಾಗಿ ನೋಡಲಾರಂಭಿಸಿದರು. ವಾರ ಹತ್ತು ದಿನಗಳಿಂದಲೂ ಒಂದು ಮಾತನ್ನೂ ಆಡದ ಸ್ವಾಮೀಜಿಗಳ ಬಾಯಿಂದ ಈ ಮಾತು ಬಂತೇ ಎಂದು ಎಲ್ಲರೂ ಅವರತ್ತ ತಿರುಗಿದರು. ಅವರು ಮಾತ್ರ ನಿರ್ಲಿಪ್ತರಾಗಿ ತಮಗೂ ಇದಕ್ಕೂ ಸಂಬಂಧವೇ ಇಲ್ಲವೆನ್ನುವಂತೆ ಕುಳಿತಿದ್ದರು. ಪರಿಸ್ಥಿತಿಯನ್ನು ಅವಲೋಕಿಸಿದ ಕಾಳಿಂಗೇಗೌಡರೇ, 'ಸ್ವಾಮೀಜಿಗಳು ತಮ್ಮ ಮಗನ ಸಾವಿನಿಂದ ಕಂಗಾಲಾಗಿ ಸಾವಿನ ಸಾಕ್ಷಾತ್ಕಾರದತ್ತ ಮುಖ ಮಾಡಿದ್ದಾರೆ, ಮೇಲಾಗಿ ಹನುಮಂತನ ಪ್ರತಿರೂಪವಾದ ಈ ಕೋತಿಯೂ ಹುಡುಕಿಕೊಂಡು ಬಂದು ದೇವರ ಮುಂದೆ ಪ್ರಾಣಬಿಟ್ಟಂತೆ ಪ್ರಾಣಬಿಟ್ಟಿದೆ. ಇದರ ಹಿಂದೆ ಏನೋ ಶಕ್ತಿ ಇದೆ. ಆದ್ದರಿಂದ ಗುರುಗಳು ಹೇಳಿದಂತೆ ಸಾವಿನ ಮಠ ಎನ್ನುವುದೇ ಸೂಕ್ತ'ವೆಂದು ನಿರ್ಣಯ ಕೊಟ್ಟುಬಿಟ್ಟರು. ಮಠ ಕಟ್ಟುವುದೇ ಜನಸಾಮಾನ್ಯರಿಗೆ ಮನಃಶಾಂತಿಯನ್ನು ನೀಡಲೇ ಆಗಿರುವುದರಿಂದ ಸಾವಿನ ಮಠ ಎನ್ನುವುದು ಅಪಸ್ವರದಂತೆ ಕಾಣುವುದರಿಂದ 'ಸಾವಿರದ ಮಠ'ವೆಂದು ಕರೆಯುವುದೇ ಸೂಕ್ತವೆಂದು ಶಾನುಭೋಗರೂ ತಮ್ಮ ಸಲಹೆಯನ್ನು ಮುಂದಿಟ್ಟರು. ಸ್ವಾಮೀಜಿಗಳು ಒಂದು ಕಿರುನಗೆ ನಕ್ಕರು. ಅದನ್ನು ಸಮ್ಮತಿಯೆಂದು ಭಾವಿಸಿದ ಭಕ್ತವೃಂದ ಮತ್ತೊಮ್ಮೆ ಜೈಕಾರ ಹಾಕಿತು.

ಸಕಲ ಗೌರವಗಳೊಂದಿಗೆ ವೀರ ಹನುಮನ ಸಂಸ್ಕಾರ ನೆರವೇರಿತು. ಅದರ ಸಮಾಧಿಯ